ಹೇಳಿಕೊಂಡಳು. ಟೀವಿಯಲ್ಲಿ ಅಲ್ಲಿ ಇಲ್ಲಿ ಕಾಣಿಸಿಕೊಳ್ಳುವ ರಾಮಾಚಾರಿ ಹತ್ತಿರ ಕರೆದುಕೊಂಡು ಹೋಗಿದ್ದಳಂತೆ. ಶೋಭಾರಾಜು ಅವರ ಸ್ಕೂಲಿಗೆ ಕರೆದುಕೊಂಡು ಹೋಗಿದ್ದಳಂತೆ. ಇನ್ನೂ ಯಾರವ್ವೋ ಕೆಲವು ಹೆಸರು ಹೇಳಿದಳು. ಚಿನ್ನು ಯಾರಿಗೂ ರೆಸ್ಪಾಂಡ್ ಮಾಡುತ್ತಿಲ್ಲವಂತೆ.

'ನನ್ನೊಳಗಿನ ಕಣ್ಣೀರು ಇಂಗಿ ಹೋದಂತೆ ಅವನೊಳಗಿನ ಕಲೆ ಇಂಗಿಹೋಗಿಬರಬಹುದು ಅನಿಸುತ್ತೇರಿ' ಅಂದಳಾಕೆ ದಿಗಿಲಿನಿಂದ.

ಮತ್ತೆ ಆಕೆಯಿಂದ ಫೋನಿಲ್ಲ.

ಬೇಸಿಗೆ ಕಾಲ ಬಂತು. ಸಮುದ್ರ ಉಕ್ಕಿ ಬರುವುದರೊಂದಿಗೆ ಫೆಬ್ರುವರಿಯಲ್ಲೇ ತಲೆ ಸಿಡಿದುಹೋಗುವಂಥ ಬಿಸಿಲನ್ನು ಹೊತ್ತು ತಂದಿತು.

ಮಾರ್ಚ್ ಎಪ್ರಿಲ್ ಹೊತ್ತಿಗೆ ಬಿಸಿಲಿನ ಹೊಡೆತಕ್ಕೆ ಜನ ತತ್ತರಿಸಿ ಹೋಗುತ್ತಿರಬೇಕಾದರೆ ತಣ್ಣನೆಯ ತುಂತುರು ಸಿಡಿಸುವಂಥ ಬೇಸಿಗೆಮಳೆಯಂತೆ ಆಕೆಯ ಫೋನ್ ಬಂತು. ದನಿ ಕೇಳುತ್ತಿದ್ದಂತೆಯೇ ತುಂಬಾ ಸಂತೋಷದಲ್ಲಿದ್ದಾಳೆಂದು ಅರ್ಥವಾಗಿಬಿಟ್ಟಿತು.

'ಏನ್ ಸಮಾಚಾರ?' ಅಂದೆ ನಗುತ್ತ.

'ನೀವು ಒಂದ್ಸಲ ನಮ್ಮನೆಗೆ ಬರಬೇಕ್ರೀ' ಅಂದಳಾಕೆ ಉದ್ವೇಗದಿಂದ.

'ಯಾಕೆ?'

'ಹೇಳಿದರೆ ಸಾಲದು. ನೀವು ನೋಡಬೇಕು. ಈಗ ನಮ್ಮವನು ಮನೇನ ಒಂದು ಸಣ್ಣ ಜಂಗಲ್ ಮಾಡಿಟ್ಟಿದಾನೆ. ಆಟಗೀಟ ಏನಾದರೂ ಕಲ್ತುಕೋತಾನೆ ಅಂತ ಸಮ್ಮರ್ ಸ್ಕೂಲ್‌ಗೆ ಜಾಯಿನ್ ಮಾಡಿದ್ರೆ... ಅವರೇನೋ ನರ್ಸರಿಗೆ ಕರೆದುಕೊಂಡು ಹೋಗಿದ್ರಂತೆ ಪಿಕ್ನಿಕ್‌ಗೆ. ಯಾವ ಮೂಡಲ್ಲಿದ್ನೋ ಏನೋ ಬರ್ತಾ ಬರ್ತಾ ನಾಲ್ಕು ಚೆಂಡು ಹೂಗಳ ಸಸಿಗಳನ್ನು ಕೊಂಡುಕೊಂಡು ಬಂದ. ಅವುಗಳನ್ನು ನನ್ನ ಕೈಯಿಂದಲೇ ಕುಂಡಲದಲ್ಲಿ ನೆಡಿಸಿದ. ಈಗ ಅವುಗಳೊಂದಿಗೆ ಮಾತಾಡಲು ಶುರು ಮಾಡಿದಾನೆ.'

'ಏನು?'

'ಹೌದೂರೀ... ನಾನು ನೋಡಿದರೆ ನಾಚಿಕೆಪಟ್ಟು ನಿಲ್ಲಿಸಿಬಿಡ್ತಾನೆ. ಆದರೆ ದಿನಾಲು ಅವುಗಳೊಂದಿಗೆ ಸಾಕಷ್ಟು ಮಾತಂತೂ ಆಡ್ತಿದಾನೆ. ಸಸಿಗಳೊಂದಿಗೆ ಮಾತಾಡಿದರೆ ಅವು ಬೇಗ ಬೆಳೆಯುತ್ತವೆ ಅಂತ ಯಾರೋ ಹೇಳಿದರಂತೆ. ಅಷ್ಟೇ ಇನ್ನು. ನನ್ನಿಂದ ಬಗೆಬಗೆಯ ಹೂಗಿಡಗಳ ಖರೀದಿ ಮಾಡಿಸ್ತಿದಾನೆ. ತಾನೇ ಹತ್ತಿರವಿದ್ದು ಅವುಗಳಿಗೆ ನೀರುಣಿಸುತ್ತಿದ್ದಾನೆ. ಆ ಹೂಗಳನ್ನು ಮುಟ್ಟಿ ಸಂಭ್ರಮಿಸುತ್ತಿದ್ದಾನೆ. ಎಲೆಗಳೊಂದಿಗೆ ಮಾತಾಡ್ತಿದಾನೆ. ನನಗೆಷ್ಟು ಸಂತೋಷವಾಗಿದೆಯೋ ಅವನು ಹಾಗೆ ಪ್ಲಾಂಟ್‌ಗಳೊಂದಿಗೆ ಫ್ರೆಂಡ್‌ಶಿಪ್ ಮಾಡ್ತಿರೋದು ನೋಡಿ ಹಾಗೆ ಮನಸು ಬಿಚ್ಚಿ ಮಾತಾಡ್ತಿರೋದು ನೋಡಿ. ಎಲ್ಲಕ್ಕಿಂತ ಮುಖ್ಯವಾಗಿ ಅವನಿಗೆ ನನ್ನ ಮೇಲಿನ ಅಟೆನ್ಷನ್ ಕೂಡ ಸಾಕಷ್ಟು ಕಡಿಮೆಯಾಗಿದೆ.

ಮೊನ್ನೆ ಒಂದು ದಿನ ಹೀಗೇ ಸಸಿಗಳನ್ನು ಕೊಂಡುಕೊಳ್ತಿರುವಾಗ 'ನಮ್ಮ ಮನೆಯಲ್ಲಿ ಹೆಂಗಮ್ಮಾ? ಎಲ್ಲಿ ಇಟ್ಕೊಳ್ಳೋದು' ಅಂದ ಹೀಯಾಳಿಕೆಯ ದನಿಯಲ್ಲಿ. ಯಾಕೋ ಗೊತ್ತಿಲ್ಲ ನನಗೆ ನಮ್ಮಪ್ಪ ನೆನಪಾದ. ನೋಡ್ತೀನಿ... ನೋಡ್ತೀನಿ... ಸ್ವಲ್ಪ ಗಿಡಮರಗಳು ಇರುವ ಒಳ್ಳೆ ಮನೆ ಸಿಕ್ಕರೆ ಈ ಫ್ಲ್ಯಾಟ್‌ನ ಯಾರಿಗಾದರೂ ಬಾಡಿಗೆಗೆ ಕೊಟ್ಟು ಆ ಮನೆಗೆ ಹೋಗಿಬಿಡ್ತೀನಿ. ಮೇಲೆ ಬದುಕಿದ್ರೆ ಲಾಭ ಇಲ್ಲಾರೀ. ಕೆಳಗೆ ಬದುಕಿದರೇ ಸುಖ. ಸ್ವಲ್ಪ ನೆಲ, ಮಣ್ಣು, ಗರಿಕೆ ತಾಕಿದರೆ